ಲಭ್ಯವಿದೆ. ಆದರೆ ದುಬಾರಿ. ಒಂದು ಕೊಠಡಿಗೆ ₹ 3 ಸಾವಿರಕ್ಕೂ ಹೆಚ್ಚು ಬಾಡಿಗೆ ಇದೆ.

ಪ್ರವಾಸಕ್ಕೆ ಬರುವ ಶಾಲಾ– ಕಾಲೇಜು ಮಕ್ಕಳು, ಸಾಮಾನ್ಯ ಪ್ರವಾಸಿಗರಿಗಾಗಿ ಕೆಎಸ್‌ಟಿಡಿಸಿ ನಿರ್ಮಿಸಿರುವ ಯಾತ್ರಿ ನಿವಾಸದ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲಾಗಿದೆ. ಇಲ್ಲಿ ದೊಡ್ಡ ಹಾಲ್, ಡಾರ್ಮೆಟ್ರಿಗಳಿವೆ. ದಿನಕ್ಕೆ ₹ 800ರಿಂದ ₹ 1,500 ಶುಲ್ಕವಿದೆ.

ಜೋಗ ಸಮೀಪದ ತಲಕಳಲೆ ಜಲಾಶಯದ ಬಳಿ ಕಳೆದ ವರ್ಷ ₹ 10 ಕೋಟಿ ವೆಚ್ಚದಲ್ಲಿ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಆರಂಭಿಸಲಾಗಿದೆ. ಇಲ್ಲಿ ಒಟ್ಟು 29 ಕಾಟೇಜ್‌ಗಳಿವೆ. 23 ಗಂಟೆ ಅವಧಿಗೆ ಒಬ್ಬರಿಗೆ ₹ 3,300 ಭರಿಸಿದರೆ, ಊಟ, ಉಪಾಹಾರ, ತಲಕಳಲೆ ಹಿನ್ನೀರಿನಲ್ಲಿ ಬೋಟಿಂಗ್, ಟ್ರೆಕ್ಕಿಂಗ್ ಹಾಗೂ ಜೋಗ ವೀಕ್ಷಣೆ ಉಚಿತವಿರುತ್ತದೆ. ಅಲ್ಲದೇ, ಜೋಗ ಸುತ್ತಮುತ್ತ 25ಕ್ಕೂ ಹೆಚ್ಚು ಅಧಿಕೃತ ಮತ್ತು ಅನಧಿಕೃತ ಖಾಸಗಿ ವಸತಿ ಗೃಹಗಳಿವೆ.

ಜೋಗದಲ್ಲೇ ಇರುವ 2 ಎಕರೆ ಪ್ರದೇಶದಲ್ಲಿ ಹೆರಿಟೇಜ್ ವಿಲೇಜ್ ನಿರ್ಮಿಸಲು ಹೈದರಾಬಾದ್ ಮೂಲದ ಕಂಪೆನಿಗೆ 30 ವರ್ಷಗಳ ಅವಧಿಗೆ 2009ರಲ್ಲೇ ಗುತ್ತಿಗೆ ನೀಡಲಾಗಿತ್ತು. ಈಗಾಗಲೇ ₹ 20 ಕೋಟಿ ಖರ್ಚು ಮಾಡಲಾಗಿದೆ. ಆದರೆ, ಅರಣ್ಯ ಇಲಾಖೆ ಈ ಜಾಗಕ್ಕೆ ತಕರಾರು ತೆಗೆದ ಕಾರಣ ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿದೆ.

## ನಿರ್ವಹಣಾ ಪ್ರಾಧಿಕಾರ

ಜೋಗ ಜಲಪಾತ ಹಾಗೂ ಅದರ ಸುತ್ತಲ ಪ್ರದೇಶದಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು, ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯಲು ರಾಜ್ಯ ಸರ್ಕಾರ 2002ರಲ್ಲಿ ಜೋಗ ನಿರ್ವಹಣಾ ಪ್ರಾಧಿಕಾರ ರಚಿಸಿತ್ತು. ಪ್ರವಾಸೋದ್ಯಮ ಸಚಿವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದು, ಶಿವಮೊಗ್ಗ ಜಿಲ್ಲಾಧಿಕಾರಿ ಅದರ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಪ್ರವಾಸಿಗರಿಂದ ಸಂಗ್ರಹಿಸುವ ಶುಲ್ಕದಿಂದ ಸ್ವಚ್ಛತೆ, ಕುಡಿಯುವ ನೀರು, ದೀಪದ ವ್ಯವಸ್ಥೆ ಕಲ್ಪಿಸಲಾಗಿದೆ.

ಲಿಂಗನಮಕ್ಕಿ ಅಣೆಕಟ್ಟೆಯ ಕೆಳ ಭಾಗದಲ್ಲಿರುವ 60 ಎಕರೆ ಪ್ರದೇಶದಲ್ಲಿ ಮೈಸೂರಿನ ಕೆಆರ್‌ಎಸ್ ಮಾದರಿ ಉದ್ಯಾನ ನಿರ್ಮಿಸಲು ಸರ್ಕಾರ 2005ರಲ್ಲೇ ಗುದ್ದಲಿಪೂಜೆ ಮಾಡಿತ್ತು. ನಂತರ ಯೋಜನೆ ನನೆಗುದಿಗೆ ಬಿದ್ದಿದೆ. ಕೆಪಿಸಿ ಒಡೆತನದಲ್ಲಿದ್ದ ಈ ಜಾಗವನ್ನು ಈಚೆಗಷ್ಟೇ ಜೋಗ ನಿರ್ವಹಣಾ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ.

ಅಲ್ಲಿ ಆಕರ್ಷಕ ಉದ್ಯಾನ, ಬೆಂಗಳೂರಿನ ವಂಡರ್ ಲಾ ಮಾದರಿಯಲ್ಲಿ ಮನರಂಜನಾ ಕೇಂದ್ರ ಸ್ಥಾಪನೆ, ಬಣ್ಣದ ಕಾರಂಜಿ ನಿರ್ಮಿಸಲು ಯೋಜನೆ ಸಿದ್ಧಗೊಂಡಿದೆ. ಪುಣೆ ಮೂಲದ ಕಂಪೆನಿಯೊಂದು ಯೋಜನೆಯ ರೂಪುರೇಷೆ ಸಿದ್ಧಪಡಿಸಿದೆ. ಅದಕ್ಕಾಗಿ ಕೇಂದ್ರ ಪ್ರವಾಸೋದ್ಯಮ ಇಲಾಖೆ ₹ 4.62 ಕೋಟಿ ಬಿಡುಗಡೆ ಮಾಡಿದೆ.

ಜೋಗ ಜಲಪಾತ ದೇಶದ ಎರಡನೇ ದೊಡ್ಡ ಜಲಪಾತ. ಮೇಘಾಲಯದ ನೋಹ್‌ಕಲಿಕಾಯ್ ದೇಶದ ದೊಡ್ಡ ಜಲಪಾತ. ವಿಶ್ವದ ಪ್ರವಾಸಿ ಜಲಪಾತಗಳ ಪಟ್ಟಿಯಲ್ಲಿ ಜೋಗ 13ನೇ ಸ್ಥಾನದಲ್ಲಿದೆ. ಜೋಗ ನೋಡಲು ಬಂದ ಪ್ರವಾಸಿಗರು ಮೊದಲೇ ಕೆಪಿಸಿಯಿಂದ ಅನುಮತಿ ಪಡೆದಿದ್ದರೆ, ನಿಷೇಧಿತ ಪ್ರದೇಶಗಳಾದ ಮಹಾತ್ಮಾಗಾಂಧಿ, ಶರಾವತಿ ಜಲ ವಿದ್ಯುದಾಗಾರ, ತಲಕಳಲೆ ಜಲಾಶಯ, ಲಿಂಗನಮಕ್ಕಿ ಜಲಾಶಯಗಳನ್ನೂ ನೋಡಬಹುದು.

## ಸಂಗೀತ ಕಾರಂಜಿ ಮತ್ತು ಲೇಸರ್ ಶೋ

ಜೋಗ ಜಲಪಾತದ ಮುಂಭಾಗ ಸಂಗೀತ ಕಾರಂಜಿ ಮತ್ತು ಲೇಸರ್ ಶೋ ಪ್ರದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಕೋಲ್ಕತ್ತಾ ಮೂಲದ ಪ್ರೀಮಿಯರ್ ಲೀಗ್ ಕಂಪೆನಿ ಮಲೇಷ್ಯಾ ತಂತ್ರಜ್ಞಾನದಲ್ಲಿ ₹ 1.25 ಕೋಟಿ ವೆಚ್ಚದಲ್ಲಿ 2010ರಲ್ಲಿ ಸ್ಥಾಪಿಸಿತ್ತು. ನೀರಿನ ಪರದೆಯ ಮೇಲೆ ಸಂಗೀತದ ಹಿಮ್ಮೇಳಕ್ಕೆ ಅನುಗುಣವಾಗಿ ಅತ್ಯಂತ ಸುಂದರವಾಗಿ ಮೂಡಿ ಬರುವ ಲೇಸರ್ ಶೋ ನೋಡಲು ಪ್ರವಾಸಿಗರು ಕಿಕ್ಕಿರಿದು ಸೇರುತ್ತಾರೆ. ಪ್ರತಿ ದಿನ ಸಂಜೆ 7ರಿಂದ 9ರವರೆಗೆ ಈ ಪ್ರದರ್ಶನ ಇರುತ್ತದೆ.

## ಈಡೇರದ ಗಾಜಿನ ಸೇತುವೆ ಕನಸು

ಆದರೆ ಜಲಪಾತದ ನೀರು ಧುಮುಕುವ ಮೇಲ್ಭಾಗದಲ್ಲಿ ಚೀನಾ ಮಾದರಿಯ ಗಾಜಿನ ಸೇತುವೆ ನಿರ್ಮಾಣ, ರೋಪ್‌ವೇ ಮತ್ತು ಜಲಪಾತದ ಗುಂಟ ಕೆಳಗೆ ಇಳಿಯುವ ಕೇಬಲ್ ಕಾರ್ ಪ್ರಸ್ತಾಪಕ್ಕೆ ಚಾಲನೆ ಸಿಕ್ಕಿಲ್ಲ. ರಾತ್ರಿ ವೇಳೆ ಜಲಪಾತ ವೀಕ್ಷಣೆಗೆ ಬೆಳಕಿನ ವ್ಯವಸ್ಥೆ ಕಲ್ಪಿಸುವ ಕಾರ್ಯವನ್ನು ಚೆನ್ನೈ ಮೂಲದ ಕಂಪೆನಿ ಪೂರ್ಣಗೊಳಿಸಿದೆ. ಮುಂದಿನ ತಿಂಗಳಿನಿಂದ ರಾತ್ರಿ 10ರವರೆಗೆ ಪ್ರವಾಸಿಗರು ಜಲಪಾತದ ಸೌಂದರ್ಯ ಸವಿಯಬಹುದು.

## ಲಿಂಗನಮಕ್ಕಿ ನೀರಿನ ಜಾಲ

1964ರಲ್ಲಿ 59.13ಮೀ ಎತ್ತರ, 2,749ಮೀ ಉದ್ದ ಇರುವ ಲಿಂಗನಮಕ್ಕಿ ಅಣೆಕಟ್ಟೆ ನಿರ್ಮಿಸಲಾಯಿತು. 1,992 ಚದರ ಕಿ.ಮೀ ಜಲಾನಯನ ಪ್ರದೇಶ ಹೊಂದಿರುವ ಈ ಜಲಾಶಯ 4,435ದಶಲಕ್ಷ ಘನ ಮೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದೆ.

ತಲಕಳಲೆ ಜಲಾಶಯ, ಶರಾವತಿ ವಿದ್ಯುದಾಗಾರ, ಕಾರ್ಗಲ್ ಜಲಾಶಯ, ಮಹಾತ್ಮಾಗಾಂಧಿ ವಿದ್ಯುದಾಗಾರಕ್ಕೆ ಸಾಗುತ್ತದೆ. ಮಹಾತ್ಮಗಾಂಧಿ ವಿದ್ಯುದಾಗಾರ ಹಾಗೂ ಶರಾವತಿ ವಿದ್ಯುದಾಗರದಲ್ಲಿ ವಿದ್ಯುತ್ ಉತ್ಪಾದಿಸಿ ಹೊರಬಂದ ನೀರು ಗೇರುಸೊಪ್ಪ ಅಣೆಕಟ್ಟೆ ಮೂಲಕ ಗೇರುಸೊಪ್ಪ ವಿದ್ಯುದಾಗರಕ್ಕೆ ಪೂರೈಕೆಯಾಗುತ್ತದೆ.

## ಎಲ್ಲಿಂದ ಎಷ್ಟು ದೂರ?

ಜೋಗ ಜಲಪಾತವನ್ನು ಗೇರುಸೊಪ್ಪ ಜಲಪಾತ ಎಂದೂ ಕರೆಯಲಾಗುತ್ತದೆ. ಜಲಪಾತದ ಎದುರಿನ ಮೇಲಭಾಗದಲ್ಲಿ ಜೋಗ ಗ್ರಾಮವಿದ್ದರೆ, ಜಲಪಾತದ ಕೆಳಗೆ ಗೇರುಸೊಪ್ಪ ಗ್ರಾಮವಿದೆ. ಜೋಗ ಶಿವಮೊಗ್ಗ ಜಿಲ್ಲೆಗೂ, ಗೇರುಸೊಪ್ಪ ಉತ್ತರ ಕನ್ನಡ ಜಿಲ್ಲೆಗೂ ಸೇರಿವೆ.

ರಾಜ್ಯದ ರಾಜಧಾನಿ ಬೆಂಗಳೂರಿನಿಂದ ಜೋಗ 372 ಕಿ.ಮೀ. ದೂರದಲ್ಲಿದೆ. ಶಿವಮೊಗ್ಗದಿಂದ 100 ಕಿ.ಮೀ. ಸಾಗರದಿಂದ 32 ಕಿ.ಮೀ, ಹೊನ್ನಾವರದಿಂದ 56 ಕಿ.ಮೀ, ಶಿರಸಿಯಿಂದ 59 ಕಿ.ಮೀ ಅಂತರದಲ್ಲಿದೆ.

ಬೆಂಗಳೂರಿನಿಂದ ಶಿವಮೊಗ್ಗ ಹಾಗೂ ಸಾಗರ ತಾಲ್ಲೂಕಿನ ತಾಳಗುಪ್ಪದವರೆಗೆ ರೈಲಿನ ಸೌಲಭ್ಯವಿದೆ. ತಾಳಗುಪ್ಪದಿಂದ ಜೋಗಕ್ಕೆ 16 ಕಿ.ಮೀ. ಬಸ್ ಸೌಲಭ್ಯವಿದೆ. ತಾಳಗುಪ್ಪದಿಂದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದವರೆಗೆ ರೈಲು ಮಾರ್ಗ ವಿಸ್ತರಿಸಲು ಈ ಬಾರಿಯ ರೈಲ್ವೆ ಬಜೆಟ್‌ನಲ್ಲಿ ಅನುಮೋದನೆ ದೊರೆತಿದ್ದು, ಅದು ಸಾಕಾರಗೊಂಡರೆ ಜೋಗದವರೆಗೂ ರೈಲಿನಲ್ಲೇ ಸಾಗಬಹುದು.

ಹೀಗೆ ಶರಾವತಿ ನದಿಯ ಹನಿ ನೀರೂ ವ್ಯರ್ಥವಾಗದಂತೆ ವಿದ್ಯುತ್ ಉತ್ಪಾದನೆಯ ಜಾಲ ಬೆಸೆಯಲಾಗಿದೆ. ಕಾರ್ಗಲ್ ಜಲಾಶಯ ಭರ್ತಿಯಾದ ನಂತರ ಹೊರ ಹಾಕುವ ನೀರು, ಇಲ್ಲವೇ, ಬೇಸಿಗೆಯಲ್ಲಿ ಬಸಿದ ನೀರು ಮಾತ್ರ ಜಲಪಾತ ತಲುಪುತ್ತದೆ. ಹಾಗಾಗಿ, ಜಲಪಾತ ಬೇಸಿಗೆ ವೇಳೆಗೆ ಕಳೆಗುಂದುತ್ತದೆ.

## ಶರಾವತಿ ಐತಿಹ್ಯ ಮತ್ತು ಜಲಪಾತದ ದಾರಿ

ಶರಾವತಿ ನದಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥದಲ್ಲಿ ಉಗಮವಾಗುತ್ತದೆ.

ವನವಾಸಕ್ಕೆ ಬಂದಾಗ ಸೀತೆ ಬಾಯಾರಿಕೆ ನೀಗಿಸಲು ಶ್ರೀರಾಮ ನೆಲಕ್ಕೆ ಬಾಣ ಹೊಡೆದಾಗ ಚಿಮ್ಮಿದ ನೀರು 'ಶರಾವತಿ' ನದಿಯಾಗಿ ಹರಿಯಿತು ಎಂಬ ನಂಬಿಕೆ ಇದೆ. 'ಶರ' ಎಂದರೆ ಬಾಣ, ವತಿ ಎಂದರೆ ಮಹಿಳೆ. ಅಂಬುತೀರ್ಥ ಎಂದರೆ ಬಾಣದಿಂದ ಚಿಮ್ಮಿದ ನೀರು ಎಂದರ್ಥ. ನಂತರ ರಾಮ ಅಲ್ಲಿ ರಾಮೇಶ್ವರ ಪ್ರತಿಷ್ಠಾಪಿಸಿದ ಎಂಬ ನಂಬಿಕೆ ಇದೆ.

ಅಂಬುತೀರ್ಥದಲ್ಲಿ ಹುಟ್ಟುವ ಈ ನದಿ ಪಶ್ಚಿಮಾಭಿಮುಖವಾಗಿ ಒಟ್ಟು 80 ಕಿ.ಮೀ ಹರಿಯುತ್ತದೆ. ಜಲಪಾತದ ಮೂಲಕ ಇಳಿದು ಮುಂದೆ ಅರಬ್ಬಿ ಸಮುದ್ರದ ಒಡಲು ಸೇರುತ್ತದೆ.